486 ಶ್ರೀ. ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿಗೆ ಲೋಕೋಪಯೋಗಿ ಇಲಾಖೆಯಲ್ಲಿ ಅಪೆಂಡಿಕ್ಸ್–ಇ ಯೋಜನೆಯನ್ನು ಮಂಜೂರು ಮಾಡಲಾಗುವುದೇ;

ಆ) ಹಾಗಿಲ್ಲದಿದ್ದಲ್ಲಿ ಮಂಜೂರು ಮಾಡದಿರಲು ಕಾರಣಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹೌದು.

ಆ) ಉದ್ಭವಿಸುವುದಿಲ್ಲ.

217 ಶ್ರೀ ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಿಂದ ರಾಜ್ಯದಲ್ಲಿ ಲೆಕ್ಕ ಶೀರ್ಷಿಕೆ 5054/3054 ಅಡಿಯಲ್ಲಿ ಪಾವತಿ ಮಾಡಿರುವ ಹಣವೆಷ್ಟು; ಬಾಕಿ ಉಳಿದಿರುವ ಬಿಲ್ಲುಗಳೆಷ್ಟು;

ಆ) ಗುಲ್ಬರ್ಗಾ ವಿಭಾಗ ಮತ್ತು ಯಾದಗಿರಿ ವಿಭಾಗಗಳಲ್ಲಿ ಬಾಕಿ ಇರುವ ಬಿಲ್ಲುಗಳೆಷ್ಟು; ಬಾಕಿಯಿರುವ ಬಿಲ್ಲುಗಳಿಗೆ ಯಾವಾಗ ಹಣ ಪಾವತಿ ಮಾಡಲಾಗುವುದು;

ಇ) ಸೇಡಂ ಹಾಗೂ ಚಿಂಚೋಳಿ ತಾಲ್ಲೂಕಿನಲ್ಲಿ ಬಾಕಿ ಇರುವ ಕಾಮಗಾರಿಗಳ ಬಿಲ್ಲುಗಳ ಮೊತ್ತವೆಷ್ಟು; (ವಿವರ ಒದಗಿಸುವುದು);

ಈ) ಈ ಬಾಕಿಯಿರುವ ಬಿಲ್ಲುಗಳಿಗೆ ಯಾವಾಗ ಹಣ ಪಾವತಿಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ ಇಲಾಖೆಯಲ್ಲಿ ಏಪ್ರಿಲ್–2009ರಿಂದ ನವೆಂಬರ್ 2009ರ ವರೆಗೆ ಲೆಕ್ಕ ಶೀರ್ಷಿಕೆ–5054/3054 ಅಡಿಯಲ್ಲಿ ಪಾವತಿಸಿರುವ ಹಾಗೂ ಬಾಕಿಯಿರುವ ಬಿಲ್ಲುಗಳ ವಿವರ ಕೆಳಕಂಡಂತಿವೆ.